ಸಾಕ್ಷಿಯನ್ನು ದಿನಾಂಕ 24-06-2019ರಂದು ನ್ಯಾಯಾಲಯಕ್ಕೆ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ – ವಾದಿ ಪರ ವಕೀಲರಾದ ಶ್ರೀ ಎನ್.ಎಂ. ರವರಿಂದ ಃ-

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರಗಳೆಲ್ಲವೂ ಸತ್ಯವಾಗಿದೆ. ನಾನೇ ಸದರಿ ವಿಚಾರವನ್ನು ನನ್ನ ವಕೀಲರಿಗೆ ಹೇಳಿ ಬರೆಸಿದ್ದೇನೆ. ಸದರಿ ಪ್ರಮಾಣಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಸಾಕ್ಷಿಯು ನಿಪಿ-8ನ್ನು ನೋಡಿ ಸದರಿ ದಾಖಲಾತಿಯನ್ನು ತನ್ನ ಪತಿಯಾದ ಆರ್. ಕೃಷ್ಣಮೂರ್ತಿ ಬರೆದಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ನಿಪಿ-8ರಲ್ಲಿ ಆಕೆಯ ಪತಿಯ ಸಹಿಯನ್ನು ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-8(ಡಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಎಸ್.ವಿ. ವಕೀಲರಿಂದ ಃ-

ನಾನು 3ನೇ ತರಗತಿಯವರೆಗೂ ಓದಿರುತ್ತೇನೆ. ನಿಪಿ-8ನ್ನು ಯಾವಾಗ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪತಿ ಪತ್ರ ಬರಹಗಾರರು ಎಂದು ನುಡಿಯುತ್ತಾರೆ. ನಿಪಿ-8ನ್ನು ನಿಮ್ಮ ಪತಿಯೇ ಬರೆದಿದ್ದಾರೆ ಎಂದು ನಿಮಗೆ ಹೇಗೆ ಗೊತ್ತು ಎಂದು ಕೇಳಿದ್ದಕ್ಕೆ ಸಾಕ್ಷಿಯು ನನಗೆ ಬರವಣಿಗೆ (ಹ್ಯಾಂಡ್‌ರೈಟಿಂಗ್) ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-8ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಕೃಷ್ಣಮೂರ್ತಿ ನನ್ನ ಪತಿ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ,

(ರೂಪ. ಎಂ.ಡಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ
ಜೆ.ಎಂ.ಎಫ್.ಸಿ. ಕೆ.ಜಿ.ಎಫ್